ಹೀಗೆ ನಾಲ್ಕು ತಿಂಗಳು ಹಾಗೂ ಹೀಗೂ ಕಳೆದುಹೋಗಿತ್ತು. ಸೊಸೆಯ ವಿಪರೀತ ಯಿದ್ವಾನಗಳಿಂದ ಮುದ್ದನುಮಕ್ಕನಿಗೆ ಬಲು ತಿಕ್ಕಲು ರೇಗಿತ್ತು. ರಂಗಶ್ಯಾಮಣ್ಣನಿಗೆ ಯಾಕೋ ಸೊಸೆಯ ನಡವಳಿಕೆ ಸರಿಬಿದ್ದಿರಲಿಲ್ಲ. ಊರಿನಲ್ಲಿ ತಮ್ಮ ಸಂಸಾರದ ಬಗ್ಗೆ ಪಿಸಪಿಸ ಗುಸಗುಸ ಶುರುವಾಗಿಬಿಟ್ಟಿರುವುದು ಕಿವಿಗೆ ಬಿದ್ದಿತ್ತು. ''ಏನೋ ಅಪ್ಪಯ್ಯ ಇದು, ಮನೆ ಬೆಳಗ್ಲಿ ಅಂತ ಮಾಡ್ಕಂಡ್ ಬಂದ್ರೆ ಇವ್ಳ ಅವತಾರಾನೇ ಹಿಡಿಸ್ತಾ ಇಲ್ಲ. ಯಾವ್ ಸುಖಕ್ಕಪ್ಪ ಇವುಳ್ನ ಕೈಕಾಲು ತೊಳ್ದು ಮನೆ ತುಂಬ್ಕೊಂಡಿದ್ದು. ಹೋಗ್ಲಿ ಅಂದ್ರೆ ನಾಲ್ಕು ತಿಂಗಳಾದ್ರೂ ನೀರಾಕ್ಕೊಳ್ಳಿಲ್ಲ. ತಿಂಗಳಲ್ಲೊಂದ್ ವಾರ ಊರಲ್ಲೊ ಇಲ್ಲ ತುಮಕೂರಲ್ಲೋ ಬಿದ್ದಿರ್ತಾಳೆ. ಒಂದು ಮುದ್ದೆ ಮಾಡೋದು ಕಲ್ತಿಲ್ಲ, ಒಂದು ಸಾರು ಮಾಡೋದು ಕಲ್ತಿಲ್ಲ. ಇವುಳ್ನ ಹಿಂಗೆ ಬಿಟ್ರೆ ಹೊಲ, ಮನೆ ಉದ್ಧಾರ ಆಗೋದೆಂಗೊ.'' ಎಂದು ಮುದ್ದನುಮಕ್ಕ ಗಂಡನ ಎದುರಲ್ಲೇ ತಂಗ್ಯನ ಮುಂದೆ ಮಾತೆತ್ತಿದ್ದಳು. ''ಅಲ್ವಾ, ನೀನೆ ಉಗ್ದು ಬುದ್ಧಿ ಹೇಳು. ಮಾನ್ವಾಗಿ ಬಿದ್ದಿದ್ರೆ ಬಿದ್ದಿರ್ಲಿ ಇಲ್ದಿದ್ರೆ ಅದೆಲ್ಲಿ ಹೋಗಿ ಸಾಯ್ತಾಳೋ ಸಾಯ್ಲಿ. ಊರಲ್ಲಿ ಸರೀಕ್ರ ಎದುರ್ನಾಗೆ ತಲೆ ಎತ್ತಿ ತಿರುಗ್ದಂಗಾಯ್ತು.'' ಎಂದು ತಂಗ್ಯನು ಮುದ್ದನುಮಕ್ಕನ ಉರಿಯುತ್ತಿದ್ದ ಬೆಂಕಿಗೆ ಸಲೀಸಾಗಿಯೇ ತುಪ್ಪ ಸುರಿದಿದ್ದ. ''ಹುಡ್ಗಿ ನಡ್ವಳಿಕೆ ಒಂದು ಸಾಸಿವೆ ಕಾಳಷ್ಟೂ ಹಿಡಿಸ್ಲಿಲ್ಲ ನಂಗೆ. ನಮ್ಮೂರಲ್ಲಿ ಯಾರ್ ಮನೆಗೂ ಇಂಥ ಅದ್ವಾನ್ದ್ ಸೊಸೆ ಬಂದಿಲ್ಲ.'' ಎಂದು ವ್ಯಥೆಭರಿತ ಭಾವನೆಯನ್ನು ಹೊರ ಹಾಕಿದ್ದ ರಂಗಶ್ಯಾಮಣ್ಣ. ಮಗನಿಂದ ಗ್ರೀನ್ ಸಿಗ್ನಲ್ ಸಿಕ್ಕಿದ ಕೂಡಲೇ ಮುದ್ದನುಮಕ್ಕ ಒನಕೆ ಓಬವ್ವಳಂತೆ ರಂಗಕ್ಕೆ ಇಳಿದಿದ್ದಳು. ಅದರಂತೆ ಒಂದು ದಿನ ಬೆಳ್ಳಂಬೆಳಗ್ಗೆಯೇ ಮುದ್ದನುಮಕ್ಕ ಹಟ್ಟಿ ಮುಂದೆ ನಿಂತೇ ವಾಕ್ಸಮರವನ್ನು ಪ್ರಾರಂಭಿಸಿದ್ದಳು. ಏಳೂವರೆ ಗಂಟೆಯಾದರೂ ಸೊಸೆ ಇನ್ನೂ ಮಲಗಿದ್ದಳು. ತಂಗ್ಯನು ಗಂಗಾಳದಲ್ಲಿ ತಂಗಳು ಹಾಕಿಕೊಂಡು ನುಂಗುತ್ತಿದ್ದ. ''ಆಹಾ ಎಂಥ ಸೊಸೆ ಬಂದು ತಗ್ಲಾಕ್ಕೊಂಡ್ಲಪ್ಪ ನನ್ನ ಮನೆಗೆ. ಸಾಕೇಳೆ ಭಿತ್ರಿ, ಮದ್ವೆ ಆದಾಗಿನಿಂದ ನಿನ್ನ ಅವ್ತಾರ ನೋಡಿ ನೋಡಿ ಸಾಕಾಗೋಯ್ತು. ಸೂರ್ಯ ಹುಟ್ಟಿ ಮೂರು ಬಾರೇರಿದ್ರೂ ಹಾರಾಕ್ಕೊಂಡು ಮಲಗಿರ್ತೀಯಲ್ಲ, ಏನು ಮಹಾರಾಣಿ ಅಂತ ತಿಳ್ಕಂಡೇನು ಅರಾಸ ಇಲ್ದೋಳೆ. ನನ್ನ ಮಗ ಆಗೋವತ್ಗೆ ಸಹಿಸ್ಕಂಡವ್ನೆ, ಅಂತಿಂಥೋರಾಗಿದ್ರೆ ಪುಗ್ಗಿ ಸೀಳಿ ಊರ್ ಬಾಗಿಲ್ಗೆ ಹಾರಾಕ್ತಿದ್ರು. ದಿನಪೂರ್ತಿ ಮೊಬೈಲ್ ಫೋನ್ನಾಗೆ ಯಾವ್ ಮಿಂಡ್ಗಾರ್ನ್ ಜೊತೆ ತೂತಾಡ್ತಿರ್ತೀಯ. ಅಂಥೋಳ್ಯಾಕ್ ಈ ಹಳ್ಳಿಗೆ ಮದುವೆ ಆಗಿ ಬಂದೆ ನಮ್ಮೊಟ್ಟೆ ಉರಿಸ್ಕಂಬಾಕೆ. ಮೂರೊತ್ತು ಆ ಟೀವಿ ಬೇರೆ, ಒಳ್ಳೆ ನಾಟಕದೋರ್ ಮನೆ ಆಗೋಯ್ತು. ನೂರು ರೂಪಾಯಿ ಬರ್ತಿದ್ದ ಕರೆಂಟ್ ಚಾರ್ಜು ಈ ಮೂರ್ತಿಂಗ್ಳಿಂದ ಮುನ್ನೂರೈವತ್ತು ಬರ್ತಾ ಐತೆ. ಯಾರ್ ಮನ್ಗೆ ಕನ್ನ ಹಾಕಾಕೋಗಾನ. ಅದಿನ್ನೆಂಥ ಬುದ್ಧಿ ಕಲಿಸಿದ್ರೋನಮ್ಮ ನಿಮ್ಮಪ್ಪ, ಅಮ್ಮ. ನಿಮ್ಮ ಚಿಗಮ್ಮ ನೋಡಿದ್ರೆ ನನ್ ಮಗ್ಳು ಹಂಗೆ ಹಿಂಗೆ ಅಂಥ ದೌಲ್ ಬಿಟ್ಕಂಡ್ಲು. ಬುದ್ಧಿ ಕಲ್ತು ಮಾನ್ವಾಗಿದ್ರೆ ಸರೋದಾತು, ಇಲ್ದಿದ್ರೆ ತೌರ್ ಮನೆಗೆ ಗಾಡಿ ಕಟ್ಟು.'' ಎಂದು ಮುದ್ದನುಮಕ್ಕ ಇಷ್ಟು ದಿನ ಹೊಟ್ಟೆಯಲ್ಲಿ ತುಂಬಿಕೊಂಡಿದ್ದ ಅಗ್ನಿಕುಂಡವನ್ನು ಬಾಯಿ ಮೂಲಕ ಹೊರ ಹಾಕಿದ್ದಳು. ''ಹೆಂಗ್ಸಾಗಿದ್ರೆ ಇನ್ ಮೇಲೆ ತಪ್ಪು ತಿದ್ಕಂಡು ಸರಿಹೋಗ್ತಾಳೇಳು.'' ಎಂದು ತಂಗ್ಯನು ಒಗ್ಗರಣೆ ಹಾಕಿದ್ದ.

ಇವರೆಷ್ಟು ಮಾತನಾಡಿದರೂ ನಿರ್ಮಲ ತುಟಿಕ್ ಪಿಟಿಕ್ ಅನ್ನದೆ ಮುಸ ಮುಸ ಮೂಗೊರೆಸಿಕೊಂಡು ಮಲಗಿದ್ದ ಕಡೆಯಿಂದ ಮುಲುಕುತ್ತಿದ್ದಳು. ತಂಗ್ಯನು ಹೊಲದ ಹತ್ತಿರ ಹೋಗಿ ಒಂದಿಷ್ಟು ಕೆಲಸ ಮಾಡಿ, ಕಣದಲ್ಲಿ ರಾಗಿ ತೆನೆಯನ್ನು ಒಣಗಲು ಹರಡಿ ಮನೆಗೆ ಬಂದಾಗಲೂ ಹೆಂಡತಿ ನಿರ್ಮಲ ಇನ್ನೂ ಹಾಸಿಗೆಯ ಮೇಲೆ ಮುದುರಿಕೊಂಡು ಬಿದ್ದಿರುವುದನ್ನು ನೋಡಿ ತಂಗ್ಯನು, ''ಏ ನಿರ್ಮಲ ಒಂದಿಷ್ಟು ತಿನ್ನು ಎದ್ದೋಳೆ. ಹೆಣ್ಣು ಯಿಂಗೆ ಮಂಡಿಗೆ ಬಿದ್ರೆ ಗಂಡ್ಸು ಹೆಂಗೆ ಯೇಗೋದು.'' ಎಂದು ರಗ್ಗು ಎಳೆದಿದ್ದ. ಮುದ್ದನುಮಕ್ಕ ಹುಣಿಸೆಹಣ್ಣಿನ ಚಿತ್ರಾನ್ನ ಮಾಡಿ ತಿಂದು, ಕಣದ ಹತ್ತಿರ